# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

## ಕನ್ನಡ ಪ್ರವೇಶ ಪರೀಕ್ಷೆ – ೨೦೧೫

ಪ್ರಶ್ನೆಪತ್ರಿಕೆ – ೧

## ಅಕ್ಷರ, ಪದ, ವಾಕ್ಯ ರಚನೆ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ**

೧. ಧ್ವನಿಯ ನೆಲೆಯಲ್ಲಿ ಕನ್ನಡ ವರ್ಣಮಾಲೆಯನ್ನು ಬರೆಯಿರಿ. ೧೦

೨. ವಿಜಾತೀಯ ಸಂಯುಕ್ತಾಕ್ಷರವಿರುವ ಹತ್ತು ಪದಗಳನ್ನು ಬರೆಯಿರಿ. ೧೦

೩. ಯಾವುದಾದರೂ ಐದು ವ್ಯಂಜನಗಳ ಕಾಗುಣಿತಾಕ್ಷರಗಳನ್ನು ರೂಪಿಸಿ. ೧೦

೪. ಅಃ, ಪೋ, ಕೇ, ಬೋ, ಟಿ, ಮ್ಯ, ನ್, ರಾ, ಡ್, ಕೌ – ಈ ಅಕ್ಷರಗಳು ಏನು ಎಂಬುದರ ವಿವರಣೆ ನೀಡಿ. ೧೦

೫. ತೋ, ಸೌ, ಯ್ಯ, ಮ್ಮ, ತ್ವ – ಈ ಅಕ್ಷರಗಳನ್ನು ಬಿಡಿಸಿ ಬರೆಯಿರಿ. ೦೫

೬. ಮಹಾಪ್ರಾಣ ಎಂದರೇನು? ಉದಾಹರಣೆ ಸಹಿತ ವಿವರಿಸಿ. ೦೫

**II ೧. ಐದು ಪದಗಳಿಗೆ ಅರ್ಥ ಬರೆಯಿರಿ.** ೦೫

ಅ) ಸುಲಿದು ಆ) ಭಂಗನೆ ಇ) ಪೀತ
ಈ) ದಂಟು ಉ) ಉದುರಿತ್ತು ಊ) ಹಕ್ಕಿ
ಋ) ಮಡಗಿ ಎ) ಕರಗುತ ಏ) ಒಲ್ಲೆ ಐ) ಮಟಮಟ

**೨. ಈ ಕೆಳಗಿನ ಐದು ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸಿ.** ೧೦

ಅ) ಕಲ್ಲಿತ್ತು ಆ) ಬೇಳೇಸಾರು ಇ) ರಾವಣ
ಈ) ಐವತ್ತು ಉ) ಬಾಳೆಲೆ ಹರಡು ಊ) ನೀರೂರು
ಋ) ಕೈಲಿಕಲ್ಲು ಎ) ಹಾರುತ್ತಿತ್ತು ಏ) ಹುಡುಗ ಐ) ಗೌಡನ ಹಸು

(ಪು.ತಿ.ನೋ.)



೩. ಯಾವುದಾದರೊಂದು ಪದ್ಯಭಾಗವನ್ನು ಪೂರ್ಣಗೊಳಿಸಿ. ೦೫

ಅ) ದೊಡ್ಡಪೇಟೆಗೆ.........................
..........................................
..........................................
ಹನುಮಂತು !

ಆ) ದಿನದಿನ ನೋಡುವೆ.....................
..................................................
..................................................
ಬೆಳೆಯುವುದು.

**III ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ.** ೨೦

ಅ) ನಾಯಿ ಏಕೆ ಅಲೆಯುತ್ತಿತ್ತು?

ಆ) ಹುಡುಗ ಏನು ಮಾಡಿದ?

ಇ) ಅರ್ಧಚಂದ್ರ ಪದ್ಯದಲ್ಲಿ ಯಾರು ಯಾರಿಗೆ ಸಂವಾದ ನಡೆಯುತ್ತಿದೆ? ವಿವರಿಸಿ.

ಈ) ಚಂದ್ರನನ್ನು ಯಾವುದಕ್ಕೆ ಹೋಲಿಸಲಾಗಿದೆ?

ಉ) ಬಾಳೆಯ ಹಣ್ಣನ್ನು ನೋಡಿದ ಕಪಿಗಳಿಗೇನಾಯಿತು?

ಊ) ಮಂಗಗಳು ಎಲ್ಲಿ ವಾಸಿಸುತ್ತಿದ್ದವು?

ಋ) ಅಮ್ಮನ ಮನೆಗೆ ಹೊರಡೆಂದಾಗ ಹನುಮಂತುವಿನ ಪ್ರತಿಕ್ರಿಯೆ ಏನು?

ೠ) ಲಂಕೆ ಪಟ್ಟಣ ಸುಟ್ಟಿದ್ದನ್ನು ಹನುಮಂತು ಹೇಗೆ ಅಭಿನಯಿಸಿದನು?

**IV ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೧೦

ಅ) 'ಊಟದ ಆಟ' ಪದ್ಯದ ಸಾರಾಂಶವನ್ನು ಬರೆಯಿರಿ.

ಆ) 'ಹನುಮಂತು' ಪದ್ಯದಲ್ಲಿ ಬರುವ ಎಲ್ಲ ಪಾತ್ರಗಳನ್ನು ಪಟ್ಟಿ ಮಾಡಿ. ಮೂರು ಪಾತ್ರಗಳ ಕುರಿತು ವಿವರ ಬರೆಯಿರಿ.

ಇ) 'ಸರಪಣಿ' ಪದ್ಯದ ವಿಶೇಷತೆ ಕುರಿತು ವಿವರಿಸಿ.

***

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

## ಕನ್ನಡ ಪ್ರವೇಶ ಪರೀಕ್ಷೆ – ೨೦೧೫

**ಪ್ರಶ್ನೆಪತ್ರಿಕೆ – ೨**

## ಭಾಷೆ ಮತ್ತು ಸಾಹಿತ್ಯ ಪರಿಚಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**ಭಾಗ – ೧**

**ಅ. ಹತ್ತು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** ೧೦

೧) ಪಕ್ಷಿ ದಂಪತಿಗಳ ಹೆಸರೇನು?

೨) ಬಾಪೂವಾಣಿ ನಾಟಕವನ್ನು ಬರೆದವರು ಯಾರು?

೩) ಮರವ ಕಂಡಲ್ಲಿ ಸುತ್ತುವರು ಯಾರು?

೪) ತ್ರಿಪದಿಯ ತ್ರಿವಿಕ್ರಮ ಯಾರು?

೫) ಬ್ರಹ್ಮಜ್ಞಾನಿಗಳೆನಿಸುವವರು ಏನನ್ನು ಬಿಟ್ಟಿಲ್ಲ?

೬) ದುರ್ಯೋಧನನ ತಂದೆ ಯಾರು?

೭) ಕುವೆಂಪು ಅವರ ಪೂರ್ಣ ಹೆಸರೇನು?

೮) ಕತೆಯನ್ನು ಹೇಳಿದವರು ಯಾರು?

೯) ಅಜ್ಜಿಯ ಮೊಮ್ಮಗ ಯಾರು?

೧೦) ಮೋಜಿನ ತಾಣಗಳನ್ನು ಏನೆಂದು ಕರೆಯುತ್ತಾರೆ?

೧೧) ಹಿಂದಿಯಲ್ಲಿ ಜನಮೆಚ್ಚಿದ ಕವಿ ಯಾರು?

೧೨) ದುಶ್ಯಾಸನನ ಹೊಟ್ಟೆಯನ್ನು ಬಗೆದವನು ಯಾರು?

**ಆ. ಬಿಟ್ಟ ಸ್ಥಳದಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.** ೫

೧) ನೀರ ಕಂಡಲ್ಲಿ.......................................... (ತೇಲುವರಯ್ಯ, ಮುಳುಗುವರಯ್ಯ)

೨) ತ್ರಿಪದಿ ಕನ್ನಡ ಛಂದಸ್ಸಿನ ......................................(ಗಾಯತ್ರಿ, ಸರಸ್ವತಿ)

೩) ನೇಮನಿಷ್ಠೆಗಳನ್ನು ಮಾಡುವವರು ........................ಬಿಡಲಿಲ್ಲ.(ತಾಮಸ, ಕಾಮವ)

೪) ಕೃಷ್ಣನಿಗೆ ಬೈದವರು..................................(ಜರಾಸಂಧ, ಶಿಶುಪಾಲ)

೫) ಕುವೆಂಪು ಅವರು........................ರಲ್ಲಿ ಹುಟ್ಟಿದರು(೧೮೦೪, ೧೯೦೪)





**ಇ. ಹೊಂದಿಸಿ ಬರೆಯಿರಿ.** ೫

| | |
|---|---|
| ೧) ಗುಬ್ಬಕ್ಕ | ೧) ಸರ್ವಜ್ಞ |
| ೨) ಅಂತರಂಗ | ೨) ಕುವೆಂಪು |
| ೩) ತ್ರಿಪದಿ | ೩) ಬಹಿರಂಗ |
| ೪) ಸಭಾಪರ್ವ | ೪) ವಿ.ಜಿ. ಭಟ್ಟ |
| ೫) ಕೊಳಲು | ೫) ಎ.ಆರ್. ಕೃಷ್ಣಶಾಸ್ತ್ರಿ |
| | ೬) ಗುಬ್ಬಣ್ಣ |

**ಈ. ಯಾವುದಾದರೂ ಎರಡು ಪದ್ಯಗಳ ಸಾರಾಂಶವನ್ನು ಬರೆಯಿರಿ.** ೧೦

೧. ಕೇಡು ತಾ ಬರುವಲ್ಲಿ ಕೂಡುವುದು ದುರ್ಬುದ್ಧಿ !
ಕಾಡಿನಲ್ಲಿ ಕಿಚ್ಚು ಬಗೆದಾಗ
ಮಾರುತನು ಕೂಡಿಕೊಂಡಂತೆ ಸರ್ವಜ್ಞ

೨. ಕಾವಿಯನುಟ್ಟು ತಿರುಗುವಿರಲ್ಲ ಕಾಮವ ಬಿಡಲಿಲ್ಲ !
ನೇಮನಿಷ್ಠೆಗಳ ಮಾಡುವಿರಲ್ಲ ತಾಮಸವ ಬಿಡಲಿಲ್ಲ !
ತಾವೊಂದರಿಯದೆ ಪರರನು ತಿಳಿಯದೆ
ಶ್ವಾನನ ಕುಳಿಯಲಿ ಬೀಳುವಿರಲ್ಲ.

೩. ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಕಿವಿ ನಿಮಿರುವುದು
ಕಾಮನ ಬಿಲ್ಲನು ಕಾಣುವ ಕವಿಯೊಳು
ತಕ್ಕನೆ ಮನಮೈ ಮರೆಯುವುದು

**ಉ. ಐದಕ್ಕೆ ಟಿಪ್ಪಣಿ ಬರೆಯಿರಿ.** ೧೦

೧) ಕನಸಿನಲ್ಲಿ ೨) ಅಜ್ಜಿ ೩) ನವ ಮೋಜುತಾಣಗಳು

೪) ನವಿಲುಕಲ್ಲು ೫) ಬಾಲಕೃಷ್ಣ ೬) ಕೃಷ್ಣ ೭) ಸಭಾಪರ್ವ

**ಊ. ನಾಲ್ಕು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ.** ೨೦

೧) ದುರ್ಯೋಧನನಿಗೆ ಶಕುನಿ ಹೇಳಿಕೊಟ್ಟ ಉಪಾಯವೇನು?

೨) ಹುಡುಗನನ್ನು ಪ್ರಾಣಿಪಕ್ಷಿಗಳು ಹೇಗೆ ಉಪಚರಿಸಿದವು?

೩) ಕನ್ನಡ ಸಾಹಿತ್ಯಕ್ಕೆ ಕುವೆಂಪು ಅವರ ಕೊಡುಗೆ ಯಾವ ಬಗೆಯದು?

೪) ಅಜ್ಜಿಯ ಕತೆ ಸ್ವಾಮಿಗೆ ಬೇಸರ ತರಿಸಲು ಕಾರಣವೇನು?

೫) ಭೋಗದ ಚಟದಿಂದ ಉಂಟಾಗಿರುವ ಪರಿಣಾಮ ಎಂತಹದು?

೬) ಕೃಷ್ಣಮೂರ್ತಿಗೆ ಗಾಂಧೀಜಿಯ ಬಗ್ಗೆ ಇದ್ದ ಆಕರ್ಷಣೆ ಯಾವ ರೀತಿಯದು?

೭) ಬಸವಣ್ಣನವರು ಬಹಿರಂಗದ ಆಚರಣೆಯನ್ನು ಹೇಗೆ ವಿಡಂಬಿಸಿದ್ದಾರೆ?

## ಭಾಗ – ೨

**ಅ. ಅರ್ಥ ಬರೆಯಿರಿ.** ೪

ಹಳಿ ಹಂಗು ತಾಮಸ ಚಾಕರಿ

**ಆ. ನಾನಾರ್ಥಗಳನ್ನು ಬರೆಯಿರಿ.** ೪

ಕವಿ ಸೇರು ಪರಿ ಕಸುವು

**ಇ. ಬಿಡಿಸಿ ಬರೆಯಿರಿ.** ೪

ಒಂಟಿಯಾದ ಮಿಂಚಿನುಂಡೆ ಹಸನಾದ ರಾಮನಿಂದ

**ಈ. ಸೇರಿಸಿ ಬರೆಯಿರಿ.** ೪

ತುಂಡು + ಕಂಬಳಿ ಮೈ + ತಳೆದುದು

ಹಿಂದೆ + ಸರಿ ಮೂರು + ಹತ್ತು

**ಉ. ತದ್ಭವ ರೂಪ ಬರೆಯಿರಿ.** ೪

ವರ್ಣ ಸಂಜೆ ತ್ಯಾಗ ಸಿರಿ

**ಊ. ಗ್ರಾಂಥಿಕ ರೂಪ ಬರೆಯಿರಿ**

ಸರ್‍ಯಾಗಿಲ್ವೆ ಕೊಡ್ತಾರಾ ಬಂದ್ರ ಬರ್‍ತಾರ ೪

**ಋ. ಈ ಕ್ರಿಯಾಪದಗಳ ವಚನವನ್ನು ಬದಲಾಯಿಸಿ.** ೪

ತಂದನು ಹಾಡುತ್ತಾನೆ ಬರೆಯುತ್ತಾಳೆ ತಿಂದವು

**ೠ. ಸೂಚನೆಗೆ ಅನುಗುಣವಾಗಿ ವಾಕ್ಯರಚನೆ ಮಾಡಿ.** ೪





೧) 'ಹಣ್ಣುಕಾಯಿ' ಈ ಪ್ರಕಾರದ ಮತ್ತೊಂದು ಜೋಡಿ ಪದವನ್ನು ವಾಕ್ಯದಲ್ಲಿ ಬಳಸಿ ಬರೆಯಿರಿ.

೨) 'ನಾನು ಬೆಂಗಳೂರಿಗೆ ಹೋಗುತ್ತೇನೆ' ಎಂಬ ಉತ್ತರಕ್ಕೆ ಪ್ರಶ್ನೆಯನ್ನು ರೂಪಿಸಿ.

೩) 'ನಿನ್ನ ಬರುವಿಕೆಯನ್ನೇ ನಿರೀಕ್ಷಿಸುತ್ತೇನೆ' – ಇದನ್ನು ಪ್ರಥಮ ಪುರುಷದಲ್ಲಿ ಬರೆಯಿರಿ.

೪) 'ನಿನ್ನ ಮಾತ್ನ ಒಪ್ಪೋಣ, ಆದರೆ ಕೊಟ್ಟ ಮಾತನ್ನು ತಪ್ಪಾತರೆಯೇ' ಇದನ್ನು ಒಂದು ವಾಕ್ಯವಾಗಿ ಬರೆಯಿರಿ.

**ಎ. ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೮

೧) ಕರ್ತೃ ಪದಕ್ಕೂ ಕ್ರಿಯಾ ಪದಕ್ಕೂ ಇರುವ ಸಂಬಂಧವನ್ನು ಉದಾಹರಣೆಗಳೊಂದಿಗೆ ತಿಳಿಸಿ.

೨) ಕನ್ನಡ ವ್ಯಾಕರಣದಲ್ಲಿ ಎಷ್ಟು ರೀತಿಯ ವಚನಗಳಿವೆ? ಉದಾಹರಣೆಯೊಂದಿಗೆ ವಿವರಿಸಿ.

೩) ಸಂಕೀರ್ಣ ವಾಕ್ಯ ಎಂದರೇನು? ಉದಾಹರಣೆಯೊಂದಿಗೆ ತಿಳಿಸಿ.

****